ಬೆಲೆ ನಿಗದಿಪಡಿಸಲು ಸಾಧ್ಯವಿಲ್ಲವೇ?

ಊ)ಸಣ್ಣ ದೊಡ್ಡ ರೈತರೆಂಬ ಭಾವನೆ ಇಲ್ಲದೆ ಗೊಬ್ಬರಕ್ಕೆ ರಿಯಾಯಿತಿ ಹಣವನ್ನು ನೀಡಿ ರೈತರಿಗೆ ಬೆಳೆ ಬೆಳೆಯಲು ಅನುಕೂಲ ಮಾಡಬಾರದೇಕೆ?

ಶ್ರೀ ಎಸ್. ಚಿಕ್ಕೆಗೌಡ (ಕೃಷಿ ಸಚಿವರು):

ಅ) ರಸಗೊಬ್ಬರದ ದ್ವಿಮುಖ ಬೆಲೆನೀಡಿಕೆಯನ್ನು ಅನುಷ್ಠಾನಗೊಳಿಸುವಲ್ಲಿ ಕೆಲವು ಆಡಳಿತಾತ್ಮಕ ಅಡಚಣೆ ಇರುವುದು ಸರ್ಕಾರದ ಮನಗಂಡಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಈ ಯೋಜನೆ ಅಡಿಯಲ್ಲಿ ಒದಗಿಸಿರುವ ಸೌಲಭ್ಯದ ದುರುಪಯೋಗ ಆಗಬಹುದಾದ ಸಾಧ್ಯತೆಗಳಿರುವುದೂ ಸಹ ಸರ್ಕಾರ ಗಮನಿಸಿದೆ ಆದ್ದರಿಂದ ಈ ಸೌಲಭ್ಯದ ದುರುಪಯೋಗವಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸುವ ಸರ್ಕಾರದ ವಿಧಿ ವಿಧಾನಗಳನ್ನು ಎಚ್ಚರಿಕೆಯಿಂದ ರೂಪಿಸುತ್ತಿದೆ.

ಆ) ದ್ವಿಮುಖ ಬೆಲೆ ನೀತಿಯ ಸೌಲಭ್ಯ ದುರುಪಯೋಗವಾಗದಂತೆ, ಯೋಜನೆಯ ಸರಳ ವಿಧಿ ವಿಧಾನಗಳನ್ನು ರೂಪಿಸುವುದರಿಂದ, ರೈತರಿಗೆ ರಸಗೊಬ್ಬರ ಖರೀದಿಮಾಡಲು ತೊಂದರೆಯಾಗುವುದಿಲ್ಲ.

ಇ) ರೈತರು ಬೆಳೆದಿರುವ ಬೆಳೆಗೆ ಬೆಲೆ ಇಲ್ಲದೆ ರೈತನಿಗೆ ನಷ್ಟವಾಗದಂತೆ ಸರ್ಕಾರವು ಬೆಂಬಲ ಬೆಲೆಯನ್ನು ಪ್ರತಿ ವರ್ಷ ನಿಗದಿಪಡಿಸುತ್ತದೆ. ಮಾರುಕಟ್ಟೆ ಬೆಲೆಯು ಬೆಂಬಲ ಬೆಲೆಗಿಂತ ಕಡಿಮೆಯಾದಲ್ಲಿ ಸರ್ಕಾರವೇ ಬೆಂಬಲ ಬೆಲೆಗೆ ಧಾನ್ಯಗಳನ್ನು ಖರೀದಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಈ) ಕೇಂದ್ರ ಸರ್ಕಾರದ ರಸಗೊಬ್ಬರಗಳ ಬೆಲೆ ಏರಿಕೆಯ ಘೋಷಣೆಯೊಂದಿಗೆ ಬೆಳೆಗಳ ಬೆಂಬಲ ಬೆಲೆಯನ್ನು ಸೂಕ್ತವಾಗಿ ಹೆಚ್ಚಿಸುವುದಾಗಿ ಘೋಷಿಸಿರುವುದರಿಂದ ಈ ಪರಿಸ್ಥಿತಿ ಉದ್ಭವಿಸುವುದಿಲ್ಲ.

ಉ) ಸಣ್ಣ ಮತ್ತು ಅತಿ ಸಣ್ಣ ರೈತರು ಕೊಳ್ಳಬಹುದಾದ ರಸಗೊಬ್ಬರಗಳ ಹಳೆ ಬೆಲೆ ಮತ್ತು ಹೊಸ ಬೆಲೆಯ ವ್ಯತ್ಯಾಸವನ್ನು ಕೇಂದ್ರ ಸರ್ಕಾರವು ಸಹಾಯ ಧನ ನೀಡುವ ಮೂಲಕ ಭರಿಸುತ್ತದೆ. ಆದರೆ ಉಳಿದ ರೈತರಿಗೆ ಈ ಸೌಲಭ್ಯವನ್ನು ಒದಗಿಸಲು ಸಾಧ್ಯವಿಲ್ಲ.

ಊ) ಸದ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ ಈ ಸೌಲಭ್ಯವನ್ನು ಒದಗಿಸಲು ಸಾಧ್ಯವಿಲ್ಲ.

(ಕೃಷಿ ಇಲಾಖೆಯ ಬೀಜ, ಗೊಬ್ಬರ, ಕ್ರಿಮಿನಾಶಕಗಳ ವಿತರಣೆಯಲ್ಲಿ ಅವ್ಯವಹಾರ

3581 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ, ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ 87-88, 88-89ನೇ ಸಾಲಿನಲ್ಲಿ ಕೃಷಿ ಇಲಾಖೆಯ ಓಪಿಡಿಪಿ / ಎನ್‌ಪಿಡಿಪಿ ಇತರೆ ಯೋಜನೆಗಳಲ್ಲಿ ಹಾಗೂ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ರೈತರಿಗೆ ಉಚಿತವಾಗಿ ಬೀಜ, ಗೊಬ್ಬರ, ಕ್ರಿಮಿನಾಶಕ ಔಷಧಿಗಳನ್ನು ಒದಗಿಸುವಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಜಂಟಿ ಕೃಷಿ ನಿರ್ದೇಶಕರು, ರಾಯಚೂರು ಇವರು ಸಲ್ಲಿಸಿರುವ ವರದಿ ಅಪೂರ್ಣವಾಗಿರುವುದರಿಂದ ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರು ಅಂತಿಮ ವರದಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಇದರ ಬಗ್ಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1688 ದಿನಾಂಕ :

ನಿರ್ದೇಶಕರು ಗುಲ್ಬರ್ಗಾ ಇವರ ವರದಿ ಬಂದ ನಂತರ ಕೈಗೊಂಡಿರುವ ಕ್ರಮವೇನು?

ಇ) ಈಗಲಾದರೂ ಸಹ ಜಂಟಿ ಕೃಷಿ ನಿರ್ದೇಶಕರು ಗುಲ್ಬರ್ಗಾ ಇವರ ಅಂತಿಮ ವರದಿ ಪ್ರಕಾರ ಕ್ರಮಕೈಗೊಳ್ಳಲು ಸರ್ಕಾರಕ್ಕೆ ಎಷ್ಟು ಅವಧಿಬೇಕು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಹೌದು ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಅವರು ಅವರ ಪತ್ರ ದಿನಾಂಕ : 25-3-91ರ ಮೂಲಕ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಈ ವರದಿಯೂ ಸಹ ಅಪೂರ್ಣವಾಗಿದೆ.

ಆ) ಜಂಟಿ ಕೃಷಿ ನಿರ್ದೇಶಕರು ಗುಲ್ಬರ್ಗಾ ಅವರು ಅವರ ದಿನಾಂಕ: 25-3-91ರ ಪತ್ರದ ಮೂಲಕ ಕಳುಹಿಸಿದ್ದ ಅಂತಿಮ ವರದಿಯು ಸಹ ಅಪೂರ್ಣವಾಗಿದ್ದು ಸದರೀ ವರದಿಯನ್ನು ಕೃಷಿ ಇಲಾಖೆಯ ದಿನಾಂಕ : 25-4-91ರ ಪತ್ರದ ಮೂಲಕ ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರಿಗೆ ಹಿಂತಿರುಗಿಸಿ ಪರಿಪೂರ್ಣ ವರದಿಯನ್ನು ಕೂಡಲೇ ಸಲ್ಲಿಸಲು ಕೋರಲಾಗಿದೆ. ಈ ಬಗ್ಗೆ ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಅವರೊಡನೆ ವ್ಯವಹರಿಸಲಾಗುತ್ತಿದ್ದು, ಪರಿಪೂರ್ಣ ವರದಿಯನ್ನು ಸಲ್ಲಿಸಲು ಆಗ್ರಹಿಸಲಾಗಿದೆ.

ಇ) ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರಿಂದ ಅಂತಿಮ ಪರಿಪೂರ್ಣ ವರದಿಯು ಇನ್ನೂ ಬಂದಿರುವುದಿಲ್ಲ. ಸದರೀ ವರದಿಯು ಬಂದ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ವನ್ಯ ಪ್ರಾಣಿಗಳಿಂದ ಬಲಿಯಾದ ಕುಟುಂಬಗಳಿಗೆ ವಿಮಾ ಸೌಲಭ್ಯ

2557 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವನ್ಯ ಪ್ರಾಣಿಗಳ ಹಾವಳಿಗೆ ತುತ್ತಾಗಿ ಮರಣ ಹೊಂದುವ ಕುಟುಂಬಗಳಿಗೆ ವಿಮಾ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಜೀವವಿಮಾ ನಿಗಮದ ಜೊತೆ ಹೊಂದಾಣಿಕೆ ಮಾಡಿ ಕೊಂಡಿದೆಯೇ?

ಆ) ಈಗ ಈ ಯೋಜನೆಯು ಯಾವ ಯಾವ ಜಿಲ್ಲೆಗಳಲ್ಲಿ ಜಾರಿಯಲ್ಲಿದೆ?

ಇ) ಅಗತ್ಯವಾದಾಗ ವಿಮಾ ಕಂತುಗಳನ್ನು ಯಾರು ತುಂಬುವರು?

ಈ) ಈ ಯೋಜನೆಯು ಯಾವ ಯಾವ ಪ್ರಾಣಿಗಳಿಂದ ತುತ್ತಾಗಿರುವ ಜನಕ್ಕೆ ಅನ್ವಯಿಸುತ್ತದೆ.?

ಶ್ರೀ ಈ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಖಾಲಿ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ

3555 - ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲಹೊಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?